# ಸುದ್ದಿಸಂಚಯ

## ರಾಮಕೃಷ್ಣ ಮಿಷನ್‌ಗೆ ೨೦೦೫ರ ರಾಷ್ಟ್ರೀಯ ಸಾಂಪ್ರದಾಯಿಕ ಸದ್ಭಾವ ಪುರಸ್ಕಾರ

೧೯೯೨ರಲ್ಲಿ ಸ್ಥಾಪನೆಗೊಂಡ ಕೇಂದ್ರ ಗೃಹಸಚಿವಾಲಯದ ಅಂಗವಾದ ರಾಷ್ಟ್ರೀಯ ಸಾಮುದಾಯಿಕ ಸದ್ಭಾವ ಪ್ರತಿಷ್ಠಾನವೆಂಬ ಸ್ವಾಯತ್ತ ಸಂಸ್ಥೆಯು ತನ್ನ ವಿವಿಧ ಕಾರ್ಯಕ್ರಮಗಳ ಮೂಲಕ ವಿಭಿನ್ನ ಧರ್ಮಗಳ ಹಾಗೂ ಜಾತಿಗಳ ಜನರ ಮಧ್ಯೆ ಸಾಮುದಾಯಿಕ ಸದ್ಭಾವನೆ ಹಾಗೂ ರಾಷ್ಟ್ರೀಯ ಐಕ್ಯತೆಗಳ ಭಾವನೆಗಳನ್ನು ದೃಢಪಡಿಸುತ್ತಿದೆ. ತನ್ಮೂಲಕ ಜನರು ಅಹಿಂಸೆಯ ಮಾರ್ಗವನ್ನು ಅನುಸರಿಸುತ್ತ ಪ್ರೀತಿ ಹಾಗೂ ಸೌಹಾರ್ದತೆಯೊಂದಿಗೆ ಬಾಳಲಿ ಎಂಬುದೇ ಇದರ ಉದ್ದೇಶ.




ರಾಷ್ಟ್ರಪತಿ ಡಾ. ಅಬ್ದುಲ್ ಕಲಾಂ ಅವರು ಪ್ರಧಾನ ಮಂತ್ರಿ ಡಾ. ಮನಮೋಹನ್ ಸಿಂಗ್ ಅವರ ಸಮ್ಮುಖದಲ್ಲಿ ರಾಮಕೃಷ್ಣ ಮಿಷನ್ನಿಗೆ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು. ರಾಮಕೃಷ್ಣ ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸ್ಮರಣಾನಂದಜಿ ಅವರು ಮಿಶನ್ನಿನ ಪರವಾಗಿ ಪ್ರಶಸ್ತಿಯನ್ನು ಸ್ವೀಕರಿಸಿದರು.

ಕೋಮುಗಲಭೆ, ಜಾತಿವೈಷಮ್ಯ ಹಾಗೂ ಭಯೋತ್ಪಾದಕರ ಹಿಂಸಾಚಾರಗಳಿಂದಾಗಿ ಅನಾಥರಾಗುವ ಅಸಹಾಯಕ ಮಕ್ಕಳಿಗೆ ಹಾಗೂ ಅವರ ಪರಿವಾರದವರಿಗೆ ಈ ಪ್ರತಿಷ್ಠಾನವು ಸಹಾಯ ನೀಡುತ್ತದೆ. ಇವಲ್ಲದೆ ಸಂಶೋಧನೆಗಳಿಗೆ ಪ್ರೋತ್ಸಾಹ ನೀಡುವುದು, ಪುಸ್ತಕಗಳನ್ನು ಪ್ರಕಟಿಸುವುದು ಹಾಗೂ ಪ್ರತಿ ವರ್ಷವೂ ನವೆಂಬರ್ ೧೯ರಿಂದ ೨೫ರವರೆಗೆ ಸಮುದಾಯ ಸದ್ಭಾವ ಸಪ್ತಾಹವನ್ನು ಆಚರಿಸುವುದು ಇದರ ಕಾರ್ಯಕ್ರಮಗಳು.

ಒಬ್ಬ ವ್ಯಕ್ತಿಯ ಶ್ರಮದಿಂದ ಹಾಗೂ ಒಂದು ಸಂಸ್ಥೆಯ ಧ್ಯೇಯೋದ್ದೇಶಗಳ ಮೂಲಕ ರಾಷ್ಟ್ರೀಯ ಐಕ್ಯತೆ ಹಾಗೂ ಕೋಮುವಾರುಗಳಲ್ಲಿ ಸೌಹಾರ್ದ ಮೂಡಿಸುವ ಕೆಲಸವಾಗಿದ್ದಲ್ಲಿ, ಅದನ್ನು ಗುರುತಿಸಿ, ಗೌರವಪೂರ್ವಕವಾಗಿ ಸನ್ಮಾನಿಸುವುದು ಈ ಪ್ರತಿಷ್ಠಾನದ ಮುಖ್ಯಕಾರ್ಯ. ಪ್ರತಿ ವರ್ಷವೂ ಎರಡು ಪುರಸ್ಕಾರಗಳನ್ನು ಈ ಸಂಸ್ಥೆ ನೀಡುತ್ತಿದೆ—ಒಂದು ವ್ಯಕ್ತಿಗೆ ಮತ್ತೊಂದು ಸಂಸ್ಥೆಗೆ. ವ್ಯಕ್ತಿಗೆ ಪ್ರಶಸ್ತಿ ಪತ್ರದೊಂದಿಗೆ ಎರಡು ಲಕ್ಷ ರೂಪಾಯಿಗಳನ್ನು ನೀಡಲಾಗುತ್ತಿದೆ ಹಾಗೂ ಸಂಸ್ಥೆಗೆ ಪ್ರಶಸ್ತಿಪತ್ರದೊಂದಿಗೆ ಐದು ಲಕ್ಷ ರೂಪಾಯಿಗಳನ್ನು ನೀಡಲಾಗುತ್ತಿದೆ. ಉಪರಾಷ್ಟ್ರಪತಿಗಳ ಅಧ್ಯಕ್ಷತೆಯಲ್ಲಿ ಸೇರುವ ಸಮಿತಿಯು ಯಾರಿಗೆ ಪ್ರಶಸ್ತಿ ನೀಡಬೇಕು ಎಂಬುದನ್ನು ತೀರ್ಮಾನಿಸುತ್ತದೆ.

೨೦೦೫ನೇ ಇಸವಿಯ ಪುರಸ್ಕಾರವನ್ನು ಅಸ್ಸಾಂ ರಾಜ್ಯದ ಗುವಾಹಟಿಯ ಶ್ರೀಮತಿ ಹೇಮಾ ಭರಾಲೀ ಹಾಗೂ ರಾಮಕೃಷ್ಣ ಮಿಷನ್ ಸಂಸ್ಥೆಗೆ ನೀಡಲಾಯಿತು. ರಾಷ್ಟ್ರಪತಿಗಳಾದ ಸನ್ಮಾನ್ಯ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರು ನವದೆಹಲಿಯ ವಿಜ್ಞಾನ ಭವನದಲ್ಲಿ ಮೇ ೧, ೨೦೦೬ರಂದು ನಡೆದ ವಿಶೇಷ ಕಾರ್ಯಕ್ರಮದಲ್ಲಿ ಈ ಪುರಸ್ಕಾರವನ್ನು ಅವರಿಗೆ ನೀಡಿದರು. ರಾಮಕೃಷ್ಣ ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸ್ಮರಣಾನಂದಜಿ ಮಿಷನ್ನಿನ ಪರವಾಗಿ ಪ್ರಶಸ್ತಿಯನ್ನು ಸ್ವೀಕರಿಸಿದರು. ಪ್ರಶಸ್ತಿ ಪತ್ರದ ಚಿತ್ರ ಕೆಳಗಿದೆ.



राष्ट्रीय साम्प्रदायिक सदभाव प्रतिष्ठान

राष्ट्रीय साम्प्रदायिक सदभाव पुरस्कार

रामकृष्ण मिशन को

साम्प्रदायिक सदभाव और राष्ट्रीय एकता को बढ़ावा देने में उत्कृष्ट योगदान के लिए प्रदान किया गया।

नई दिल्ली

दिनांक 01.05.06

अध्यक्ष
शासी परिषद

NATIONAL FOUNDATION FOR COMMUNAL HARMONY

NATIONAL COMMUNAL HARMONY AWARD

Awarded to Ramakrishna Mission

for outstanding contribution towards promotion of communal harmony and national integration

New Delhi

Dated 01.05.06

Chairman
Governing Council